ದಿನಾಂಕ 27-11-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :

ದಿನಾಂಕಃ 09-05-1980 ರಂದು ನನ್ನ ಮದುವೆಯಾಗಿದೆ. ನಾನು 1960 ನೇ ಸಾಲಿನಲ್ಲಿ ಜನಿಸಿದ್ದೇನೆ. ನಾನು ಹಿಸ್ಸಾ ಕೇಳಿ ಮೊದಲ ಬಾರಿಗೆ ಈ ದಾವಾ ಸಲ್ಲಿಸಿದ್ದೇನೆ. ಇದಕ್ಕಿಂತ ಮೊದಲು ಹಾವೇರಿ ನ್ಯಾಯಾಲಯದಲ್ಲಿ ನಾನು ಹಿಸ್ಸಾ ಕೇಳಿ ಮೊದಲ ಬಾರಿಗೆ ಈ ದಾವಾ ಸಲ್ಲಿಸಿದ್ದೇನೆ. ನನಗೆ ಅದರ ನಂಬರು ಗೊತ್ತಿಲ್ಲಾ. ಆ ದಾವೆಯು ಹಾವೇರಿ ನ್ಯಾಯಾಲಯದಲ್ಲಿ ಮಾತ್ರ ನಡೆದಿದೆ ನಮ್ಮ ಅಣ್ಣ ಸರಿಯಾಗಿ ದಾವೆ ನಡೆದಿರುವುದಿಲ್ಲಾ. ಆದ್ದರಿಂದ ಸದರಿ ದಾವಾ

ವಜಾ ಆಗಿರುತ್ತದೆ. ಆ ದಾವೆಯಲ್ಲಿ ನಾನು ವಿಲ್ ಮೂಲಕ ಬರುವ ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾವಾ ಸಲ್ಲಿಸಿದ್ದೆವು, ಆ ದಾವೆಯನ್ನು 2013 ರಲ್ಲಿ ಸಲ್ಲಿಸಿದ್ದೆವು. ಆ ದಾವೆಯನ್ನು ನನ್ನ ತಂದೆ, ನನ್ನ ಸಹೋದರರ ವಿರುದ್ಧ ಸಲ್ಲಿಸಿದ್ದೆವು. ಈ ದಾವೆಯಲ್ಲಿ ಸೇರಿಸಿದ ಎಲ್ಲ ಆಸ್ತಿಗಳನ್ನೂ ಸಹ ಆ ದಾವೆಯಲೂ ಸಹ ಸೇರಿಸಿದ್ದೆವು. ಎಲ್ಲ ದಾವಾ ಜಮೀನುಗಳು ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಉಳಿದ ಆಸ್ತಿಗಳನ್ನು ನಮ್ಮ ತಂದೆ ಮತ್ತು ನನ್ನ ಸಹೋದರರು ಖರೀದಿಸಿದ್ದಾರೆ.

ನಾನು ರೈಸ್ಮಿಲ್ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಸಲ್ಲಿಸಿದ್ದೇನೆ ನಮ್ಮ ತಂದೆ ಜಮೀನುಗಳಿಂದ ಬಂದ ಆದಾಯದಿಂದ ರೈಸ್ಮಿಲ್ ಜಾಗೆಯನ್ನು ಖರೀದಿಸಿ ನಂತರ ಕಟ್ಟಿಸಿದ್ದಾರೆ. 1960 ರಲ್ಲಿ ಖರೀದಿಸಿದಾರೆ. 1961 ರಲ್ಲಿ ಮಿಲ್ಲನ್ನು ಕಟ್ಟಿಸಿದ್ದಾರೆ. ಸದರಿ ರೈಸ್ಮಿಲ್ ಈಗ ನಮ್ಮ ತಂದೆ ಜೀವಿತಾವಧಿಯಲ್ಲಿ ಅಂದರೆ ನವೆಂಬರ್–2018 ರ ವರೆಗೆ ಅವರ ಸ್ವಾಧಿನದಲ್ಲಿ ಇತ್ತು. ನಮ್ಮ ತಂದೆ ರೈಸ ಮಿಲ್ಲಿನಿಂದ ಅಕ್ಕಿ ವ್ಯಾಪಾರ ಮಾಡುತ್ತಿದ್ದರು. ನಮ್ಮ ತಂದೆ ನಾಲಿಗೆ ಪವಾಡಿಮಠ ಎನ್ನುವವರಿಂದ 01 ಎಕರೆ ಜಾಗೆಯನ್ನು ಖರೀದಿಸಿದ್ದರು. ನಮ್ಮ ತಂದೆ ಕೃಷಿ ಜಮೀನನ್ನು ಖರೀದಿಸಿಅದರಲ್ಲಿ ಮಿಲ್ಲನ್ನು ಕಟ್ಟಿಸಿದ್ದರು. ನಾನು ಖರೀದಿ ಪತ್ರವನ್ನು ನೋಡಿದ್ದೇನೆ ನಮ್ಮ ತಂದೆ ಸದರಿ ಕ್ರಯ ಪತ್ರದ ಪ್ರಕಾರ 01 ಎಕರೆಯನ್ನು ಮಾತ್ರ ಖರೀದಿಸಿದ್ದಾರೆ ನಾನು ಮದುವೆಯಾದ ನಂತರ ನನ್ನ ಗಂಡನ ಮನೆಯಲ್ಲಿ ಮನೆತನದ ಸದಸ್ಯಳಾಗಿಯೇ ವಾಸವಾಗಿದ್ದೇನೆ. ನಮ್ಮ ತಂದೆ ಮತ್ತು ಆತನ ಸಹೋದರರರರು ಹಿಸ್ಸಾ ಮಾಡಿಕೊಂಡಿದ್ದಾರೆ. ಯಾವಾಗ ನಮ್ಮ ತಂದೆ ಮತ್ತು ಆತನ ಸಹೋದರರರರು ಹಿಸ್ಸಾ ಮಾಡಿಕೊಂಡಿದ್ದಾರೆ ಅಂತಾ ನನಗೀಗ ನೆನಪಿಲ್ಲ. ನಮ್ಮ ತಂದೆ ಮತ್ತು ನಮ್ಮ ಸಹೋದರರರರು ಹಿಸ್ಸಾ ಮಾಡಿಕೊಂಡಿರುವುದಿಲ್ಲಾ.

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 1993 ರಲ್ಲಿ ನಮ್ಮ ತಂದೆ ಮತ್ತು ನಮ್ಮ ಸಹೋದರರು ಹಾಗೂ ನಾನು ವಿಭಾಗ ಮಾಡಿಕೊಂಡಿದ್ದೇವೆ ಅಂದರೆ ನನಗೆ

ಗೊತ್ತಿಲ್ಲಾ. ವಿಭಾಗ ಮಾಡಿಕೊಳ್ಳುವ ಕಾಲಕ್ಕೆ ನಾನೂ ಕೂಡ ಹಾಜರಿದ್ದೆ ಅಂದರೆ ಸರಿಯಲ್ಲಾ. ಸಾಕ್ಷಿ ಮುಂದುವರೆದು ನನ್ನನ್ನು ಕರೆದಿರುವುದಿಲ್ಲಾ ಅನ್ನುತ್ತಾರೆ. ಅಕ್ಕಿ ಮಿಲ್ಲು ಮತ್ತು ಜಾಗೆಯ ಕುರಿತು ನನ್ನ ತಂದೆ ಮತ್ತು ಸಹೋದರರು ವ್ಯವಹರಿಸಿದ ಬಗ್ಗೆ ನನಗೆ ಗೊತ್ತಿಲ್ಲಾ. ನಾನು ನನ್ನ ತವರು ಮನೆಗೆ ಬಂದು ಅಲ್ಲಿ ನಡೆಯುವ ವ್ಯವಹಾರದ ಬಗ್ಗೆ ತಿಳಿದುಕೊಂಡಿರುವುದಿಲ್ಲಾ. ನನ್ನ ತವರು ಮನೆಗೆ ಬಂದು ಅಲ್ಲಿ ನಡೆಯುವ ವ್ಯವಹಾರದ ಬಗ್ಗೆ ತಿಳಿದುಕೂಳ್ಳಲು ಯಾವುದೇ ತೊಂದರೆ ಇರಲಿಲ್ಲ ಅಂದರೆ ಸಾಕ್ಷಿಯು ನಾನು ತಿಳಿದುಕೊಂಡಿದ್ದೇನೆ ಅನ್ನುತ್ತಾರೆ. ಸರ್ವೆ ನಂ.208 ರಲ್ಲಿ 05 ಎಕರೆ 24 ಗುಂಟೆ ಜಮೀನು ಇರುತ್ತದೆ. ಸರ್ವೆ ನಂ.216 ರಲ್ಲಿ 03 ಎಕರೆ 24 ಗುಂಟೆ ಜಮೀನು ಇರುತ್ತದೆ. ಇಷ್ಟು ನಮ್ಮ ಕುಟುಂಬಕ್ಕೆ ಕೃಷಿ ಜಮೀನುಗಳು ಇದ್ದವು. ಎಲ್ಲ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ದಾವಾ ಬಿ ಆಸ್ತಿಯು ಒಂದೇ ನಂಬರು ಇದ್ದು ಅದರ ಕ್ಷೇತ್ರ ಗೊತ್ತಿಲ್ಲಾ ಆಸ್ತಿ ನಂ.1 ನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲಾ. ಆಸ್ತಿ ನಂ.1 ರಲ್ಲಿ ವಿಭಾಗ ಆಗಿರುವುದಿಲ್ಲಾ. ಸದರಿ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ದಾವಾ ಮಾಡುವ ಕಾಲಕ್ಕೂ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು. 8 ರಿಂದ 12 ನೇ ಪ್ರತಿವಾದಿಯರು ಮಿಲ್ಲಿನ ಆಸ್ತಿಯನ್ನು ಖೊಟ್ಟಿಯಾಗಿ ಖರೀದಿಸಿದ್ದಾರೆ ಅಂತಾ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿದ್ದೇನೆ. 1998 ರಲ್ಲಿ 8 ರಿಂದ 12 ನೇ ಪ್ರತಿವಾದಿಯರು ಮಿಲ್ಲಿನ ಆಸ್ತಿಯನ್ನು ಖರೀದಿಸಿದ್ದಾರೆ 6 ನೇ ಪ್ರತಿವಾದಿಯು ಯಾರಿಗೂ ಗೊತ್ತಾಗದಂತೆ ಖರೀದಿಗೆ ಕೊಟ್ಟಿದ್ದಾರೆ. ರೈಸ್ ಮಿಲ್ಲನ್ನು ನಮ್ಮ ತಂದೆ ಮತ್ತು ಆತನ ಸಹೋದರರು ಕಟ್ಟಿಸಿದ್ದರು. 1998 ರ ಅವಧಿಯವರೆಗೆ ರೈಸ ಮಿಲ್ ಹಾಳಾಗಿತ್ತು. ರೈಸ್ ಮಿಲ್ಲನ್ನು 1992 ರಲ್ಲಿ ನಮ್ಮ ತಂದೆ ಅವರ ಸಹೋದರರ ಭಾಗವನ್ನು ಖರೀದಿಸಿದ್ದಾರೆ. 1992 ರಲ್ಲಿ ರೈಸ ಮಿಲ್ ನಾದುರಸ್ತಾಗಿತ್ತು ಅಂದರೆ ನಿಜ. ರೈಸ ಮಿಲ್ಲನ್ನುಅಭಿವೃದ್ಧಿಪಡಿಸುವ ಸಲವಾಗಿ ನಮ್ಮ ತಂದೆ ಮತ್ತು ಆತನ ಸಹೋದರರರು ರೈಸ್

ಮಿಲ್ಲನ್ನು KSFC ಗೆ ಅಡಮಾನ ಮಾಡಿ ಸಾಲ ಪಡೆದಿದ್ದರು ಅಂದರೆ ನನಗೆ ಗೊತ್ತಿಲ್ಲಾ. ಸದರಿ ಸಾಲವನ್ನು ನಮ್ಮ ತಂದೆ ಮತ್ತು ಆತನ ಸಹೋದರರರು ಸಕಾಲಕ್ಕೆ ಪಾವತಿ ಮಾಡಲಿಲ್ಲ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ತಂದೆ ಮತ್ತು ಆತನ ಸಹೋದರರರು ವ್ಯವಹಾರದಲ್ಲಿ ಸಾಕಷ್ಟು ಲುಕ್ಸಾನ ಅನುಭವಿಸಿದ್ದರು ಅಂದರೆ ನನಗೆ ಗೊತ್ತಿಲ್ಲಾ. KSFC ಯವರು ರೂ.13,00,000/–ಹೆಚ್ಚಿನ ಸಾಲ ಬಾಕಿ ಇದೆ ಅಂತಾ ನೋಟೀಸನ್ನು ಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲಾ. ಸತ್ಯಪ್ಪನವರ ರೈಸ ಮಿಲ್ ಬೆಳಗಾಲಪೇಟೆ ಅಂದರೆ ನಮ್ಮದೇ ಇರುತ್ತದೆ. ಸದರಿ ಸಾಲ ಮತ್ತು ಬಡ್ಡಿ ಹೆಚ್ಚಾಗಿದ್ದರಿಂದ KSFC ಯವರು ಹರಾಜು ಮಾಡಲು ನೋಟೀಸನ್ನು ಕೊಟ್ಟಿದ್ದರಿಂದ ನಮ್ಮ ತಂದೆ ಮತ್ತು ಆತನ ಸಹೋದರರರು ರೈಸ ಮಿಲ್ಲನ್ನು 8 ರಿಂದ 12 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. 2013 ರಲ್ಲಿ ನನ್ನ ಸಹೋದರರರು ರೈಸ್ ಮಿಲ್ ಮಾರಾಟ ಮಾಡಿದ ಬಗ್ಗೆ ತಿಳಿಸಿದ್ದರಿಂದ ನನಗೆ ಗೊತ್ತಾಗಿದೆ. 1998 ರಲ್ಲಿ ಮಾರಾಟ ಮಾಡಿದ್ದೇವೆ ಅಂತಾ ಹೇಳಿದ್ದಾರೆ. ಸದರಿ ರೈಸ ಮಿಲ್ಲನ್ನು ಯಾವ ಕಾರಣಕ್ಕಾಗಿ ಎಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ ಅಂತಾ ನಾನು ಕೇಳಿ ತಿಳಿದುಕೊಂಡಿದ್ದೇನೆ. ಸಾಕ್ಷಿ ಪುನಃ ಎಷ್ಟು ಹಣಕ್ಕೆ ಮಾರಾಟ ಮಾಡಿದ್ದಾರೆ ಅಂತಾ ನಾನು ಕೇಳಿ ತಿಳಿದುಕೊಂಡಿರುವುದಿಲ್ಲಾ. ನಾನು ಮೂಲ ದಾವಾ ನಂ.19/2013 ರಲ್ಲಿ ಕೃಷಿ ಜಮೀನುಗಳನ್ನು ಸೇರಿಸದೇ ಕೇವಲ ರೈಸ ಮಿಲ್ ಬಗ್ಗೆ ಮಾತ್ರ ಸಲ್ಲಿಸಿದ್ದೆ ಅಂದರೆ ಸರಿಯಲ್ಲಾ. ಕೃಷಿ ಜಮೀನುಗಳನ್ನು ಸಹ ನಮ್ಮ ಸಹೋದರರರು 14 ಮತ್ತು 15 ನೇ ಪ್ರತಿವಾದಿಯರಿಗೆ ಖರೀದಿಗೆ ಕೊಟ್ಟಿದ್ದಾರೆ. ಮೂಲ ದಾವಾ ನಂ.19/2013 ನ್ನು ಸಲ್ಲಿಸುವ ಕಾಲಕ್ಕೆ ನಮ್ಮ ಸಹೋದರರರು ಕೃಷಿ ಜಮೀನು ಗಳನ್ನು ಮಾರಾಟ ಮಾಡಿರಲಿಲ್ಲ. ದಿನಾಂಕಃ 07–09–2010 ರಂದು ಸರ್ವೆ ನಂ. 216/2 ಕ್ಷೇತ್ರ 01 ಎಕರೆ 30 ಗುಂಟೆ ಜಮೀನನ್ನು ಮಾರಾಟ ಮಾಡಿದ್ದಾರೆ ಅಂತಾ ನಾನು ಹೇಳಿ ಬರೆಸಿರುವುದಿಲ್ಲಾ. ಜಾಗೆ ಮತ್ತು ಜಮೀನುಗಳನ್ನು ಖರೀದಿದಾರರು ಅವರವರ ಕಬ್ಜಾ ವಹಿವಾಟಿ

ಯಲ್ಲಿ ಇದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ನಮ್ಮ ಊರಿನಲ್ಲಿ ಕಮಡೊಳ್ಳಿ ಎನ್ನುವವರ ಒಂದು ಪೆಟ್ರೋಲ್ ಬಂಕ್ ಇದೆ. ಅದು ನಮ್ಮ ಜಾಗೆಯ ಪಕ್ಕದಲ್ಲಿ ಬರುತ್ತದೆ. ನಾನು ನಮ್ಮ ಜಾಗೆಯನ್ನು ಹೋಗಿ ನೋಡಿರುವುದಿಲ್ಲಾ. ನಮ್ಮ ಜಾಗೆಯಲ್ಲಿ 8 ರಿಂದ 12 ನೆ ಪ್ರತಿವಾದಿಯರು ಒಂದು ಪೆಟ್ರೋಲ್ ಬಂಕ್ ಹಾಕಿದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. ಮಿಲ್ಲು ಈಗಲೂ ಅಸ್ತಿತ್ವದಲ್ಲಿ ಇದೆ. ಅದು ಉತಾರದಲ್ಲಿ ನಮ್ಮ ತಂದೆಯ ಹೆಸರಿನಲ್ಲಿಇದೆ. ಈಗಲೂ ಸತ್ಯಪ್ಪನವರ ರೈಸ್ ಮಿಲ್ ಅಂತಾ ಬೋರ್ಡ್ಇದೆ. ನನ್ನ ಸಹೋದರರು ಮಿಲ್ಲನ್ನು ಮಾರಾಟ ಮಾಡಿದ ನಂತರ ನಾನು ಹೋಗಿ ನೋಡಿರುವುದಿಲ್ಲಾ. 8 ರಿಂದ 12 ನೆ ಪ್ರತಿವಾದಿಯರು ಮಿಲ್ಲು ಇರುವ ಜಾಗೆಯಲ್ಲಿ ನಿಸ್ಸೀಮೆಶ್ವರ ಪೆಟ್ರೋಲ್ ಬಂಕ್ ಹಾಕಿದ್ದಾರೆ ಮತ್ತು ಒಂದು ತೂಕ ನಿಯಂತ್ರಣ ಮಶಿನ್ ಅನ್ನು ಅಳವಡಿಸುವ ತಯಾರಿಯಲ್ಲಿ ಇದ್ದಾರೆ ಅಂದರೆ ನನಗೆ ಗೊತ್ತಿಲ್ಲಾ. 1998 ರಿಂದ ಈವರೆಗೂ ನಮ್ಮ ತಂದೆಯ ಹೆಸರಾಗಲೀ ನಮ್ಮ ಸಹೋದರರ ಹೆಸರಿನಲ್ಲಿ ಆಗಲೀ ಮಿಲ್ಲು ಇರುವುದಿಲ್ಲಾ ಅಂದರೆ ಸರಿಯಲ್ಲಾ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ